not only fulfill 134 but they should also fulfill in letter and spirit 79 (1) and 79 (2). O.K. Now, I Will agree with the dicision given by the Speaker in Lok Sabha so far as requirements of rule are concerned. They have been fulfilled with the introduction of the Bill, a statement was laid on the table of the House.

SRI D.B. CHANDRE GOWDA : The difference between the ruling of the Speaker of the Lok Sabha and to that of this case is here, a statutory resolution is pending which should facilitate a discussion on the resolution. I only draw the attention to the Chair on the point.

SRI H. EKANTHAIAH : Further I request the Chair to direct the Government to make a statement under 79 (2) to facilitate discussion on the statutory resolution that I have moved.

MR. SPEAKER : We will take up simultaneously.

2) ಕರ್ನಾಟಕ ಜಿಲ್ಲಾ ಪರಿಷತ್ತುಗಳು ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿದೇಯಕ 1991 ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನೆ ಮಂತ್ರಿ) : ಮಾನ್ಯ ಅಧ್ಯಕ್ಷರೆ, "1991ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.....

ಪ್ರಸ್ತಾಪವನ್ನು ಮಂಡಿಸಲಾಯಿತು.

ಶಾಸನಬದ್ಧ ನಿರ್ಣಯ"

ಶ್ರೀ ಹೆಚ್. ಏಕಾಂತಯ್ಯ : (ಚಿತ್ರದುರ್ಗ) ಮಾನ್ಯ ಅಧ್ಯಕ್ಷರೆ "ರಾಜ್ಯಪಾಲರು 1ನೇ ಫೆಬ್ರವರಿ 1991 ರಂದು ಘೋಷಿಸಿದ 1991 ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್‌ಗಳ, ತಾಲ್ಲೂಕು ಪಂಚಾಯತಿ ಸಮಿತಿಗಳ, ಮಂಡಲ ಪಂಚಾಯತ್‌ಗಳ ಹಾಗೂ ನ್ಯಾಯ ಪಂಚಾಯತ್‌ಗಳ (ತಿದ್ದುಪಡಿ) ಆಧ್ಯಾದೇಶವನ್ನು (1991)ರ ಆಧ್ಯಾದೇಶ ಸಂಖ್ಯೆ - 2 ಈ ಸದನವು ಅನುಮೋದಿಸುತ್ತದೆ" ಎಂಬ ಶಾಸನಬದ್ಧ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ನಿರ್ಣಯವನ್ನು ಮಂಡಿಸಲಾಯಿತು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳುವುದೇನಾದರೂ ಇದೆಯೇ?

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೆ ಇದು ಸಾಮಾನ್ಯವಾಗಿರತಕ್ಕ ತಿದ್ದುಪಡಿ. ಇಲ್ಲಿ ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿಯ ಆಕ್ಟ್ 1983ರ 167ನೇ ಸೆಕ್ಷನ್ನಿಗೆ ತಿದ್ದುಪಡಿ ಮಂಡಿಸಿರತಕ್ಕದ್ದು. 'not less than 2/3 of the majority shall be omitted ಎಂದು ಇದೆ. ಅದನ್ನು ಮಾತ್ರ ಒಮಿಟ್ ಮಾಡಬೇಕೆಂದು ಈ ತಿದ್ದುಪಡಿಯನ್ನು ತಂದಿದ್ದೇವೆ. ಇದರ ಉದ್ದೇಶಗಳ ಬಗ್ಗೆ ನಾನು ವಿವರಣೆ ಕೊಟ್ಟಿದ್ದೇನೆ. ಈಗ ಕೆಲವು ಜಿಲ್ಲಾ ಪರಿಷತ್ತುಗಳಲ್ಲಿ

ಯಾವುದಾದರೂ ತೀರ್ಮಾನ ಮಾಡುವಾಗ 2/3ಭಾಗ ಮೆಜಾರಿಟಿ ಇರಬೇಕೆಂದಿರುವುದರಿಂದ ತೊಂದರೆಯಾಗಿದೆ. ಅಸೆಂಬ್ಲಿಯಲ್ಲಿ ಕೂಡ ಅದು ಇಲ್ಲ. ಸಾಮಾನ್ಯವಾಗಿ ಬಹುಮತದಿಂದ ತೀರ್ಮಾನ ಮಾಡುತ್ತೇವೆ. ಪಾರ್ಲಿಮೆಂಟಿನಲ್ಲಿ ಕೂಡ ಹಾಗೆ ಇದೆ. 2/3 ಮೆಜಾರಿಟಿ ಎಂಬುದು ಇರುವುದರಿಂದ ಕೆಲವು ಜಿಲ್ಲಾ ಪರಿಷತ್ತುಗಳಲ್ಲಿ ಕೆಲಸ ಕಾರ್ಯಗಳಿಗೆ ಅಡಚಣೆಯಾಗಿದೆ. ಹೋದ ಸಾರಿ ಚುನಾವಣೆಯಲ್ಲಿ ಕಾಂಗ್ರೆಸ್‌ನವರು ಜಾಸ್ತಿ ಜನ ಗೆದ್ದು ಬಂದಮೇಲೆ ಜಿಲ್ಲಾ ಪರಿಷತ್ತಿನಲ್ಲಿ ಅವರು ಸದಸ್ಯರಾಗುತ್ತಾರೆ ಯಾರು ಯಾವ ಪಕ್ಷದವರು ಬಹುಮತದಿಂದ ಕಾರ್ಯಭಾರ ನಡೆಸಿಕೊಂಡು ಬರುತ್ತಿದ್ದರು. ಅವರಿಗೆ ಸಾಮಾನ್ಯವಾಗಿ ಎಲ್ಲಿಯೂ ಈ ನಿರ್ಣಯಗಳನ್ನು ಮಾಡುವುದಕ್ಕೆ ಆಗಿಲ್ಲ. ಕೆಲವು ಸಮಯದಲ್ಲಿ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಬೀದರ್ ಜಿಲ್ಲೆಯ ಹಿತ ದೃಷ್ಟಿಯಿಂದ ಒಟ್ಟಾಗಿ ಅವರು ಕೊಟ್ಟಿರಬಹುದು ಇಲ್ಲವೆಂದು ಇಲ್ಲ. ಆದರೆ ಕೆಲವು ಪರಿಣಾಮಕಾರಿಯಾದ ನಿರ್ಣಯಗಳು ಏನಿದ್ದವು ಅವನ್ನು ಸೋಲಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಹೀಗಾಗಿ ಕಾರ್ಯಚರಣೆಗೆ ಕಷ್ಟವಾಗಿದೆ. ಸರ್ಕಾರದಿಂದ ಹೋಗತಕ್ಕ ಆದೇಶಗಳು ಆಗಲಿ ನಿಯಮಗಳು ಆಗಲಿ ನಾವು ಏನಾದರು ಹುಕುಂ ಮಾಡಿದರೆ, ಅವನ್ನು ಜಾರಿಗೆ ಕೊಡುವುದಕ್ಕೇ ಬಹಳ ಆತಂಕ ಮಾಡುತ್ತಿದ್ದಾರೆ. ಹೀಗಾಗಿ ಯಾವ ಜಿಲ್ಲಾ ಪರಿಷತ್ತಿನಲ್ಲಿ 2/3 ಮೆಜಾರಿಟಿ ಇಟ್ಟುಕೊಂಡು ಕೆಲಸ ಕಾರ್ಯ ಮಾಡುತ್ತಿದ್ದಾರೆ. ಅಲ್ಲಿ ಸುಗಮವಾಗಿ ಕೆಲಸಕಾರ್ಯಗಳು ಆಗುತ್ತಿಲ್ಲ. ಉದಾಹರಣೆಗೆ ತುಮಕೂರಿನ ಜಿಲ್ಲಾ ಪರಿಷತ್ತಿನಲ್ಲಿ ಒಂದು ಪಕ್ಷದವರು 25 ಜನರಿದ್ದಾರೆ. ವಿರೋಧ ಪಕ್ಷದವರು 40 ಮಂದಿಯ ಮೇಲೆ ಇದ್ದಾರೆ. ಇದರಿಂದಾಗಿ ಸಾಮಾನ್ಯವಾಗಿ ಅಲ್ಲಿ ನಿರ್ಣಯ ಮಾಡುವುದಕ್ಕಾಗಿಲ್ಲ. ನಿರ್ಣಯ ಇಲ್ಲದೆ ಕಾರುಭಾರ ಮಾಡಿಕೊಂಡು ಬರುತ್ತಿದ್ದಾರೆ. ಯಾರು ಅಧ್ಯಕ್ಷರಿರುತ್ತಾರೆ ಅವರೇ ನಿರ್ಣಯ ತೆಗೆದುಕೊಂಡು ಹುಕುಂ ಮಾಡಿ ಸರ್ಕಾರೀ ಆದೇಶಗಳನ್ನು ಅಲ್ಲಗಳೆಯತಕ್ಕದ್ದು, ಆತಂಕ ಮಾಡತಕ್ಕದ್ದು, ಇಂಥ ಪ್ರವೃತ್ತಿ ನಡೆದುಕೊಂಡು ಬಂದಿದೆ. ನಾವು ಕಾಂಗ್ರೆಸ್ ಪಕ್ಷದವರು, ಅಧಿಕಾರಕ್ಕೆ ಬಂದಮೇಲೆ ಹಳ್ಳಿಗಾಡಿನಲ್ಲಿರತಕ್ಕ ಬಡವರು, ಬಹಳ ಹಿಂದುಳಿದ ವರ್ಗದವರು, ದಲಿತರು ಏನಿದ್ದಾರೆ ಅಂಥವರಿಗೆ ಕಾರ್ಯಕ್ರಮ ಹಾಕಿಕೊಂಡು ಅನುಕೂಲ ಮಾಡಿಕೊಡಬೇಕೆಂದು ನಾವು ಪ್ರಯತ್ನ ಮಾಡಿದಾಗ ಅದಕ್ಕೆ ಅಡ್ಡಿ ಆತಂಕಗಳು ಬಂದಿವೆ. ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಎಷ್ಟೇ ಮೆಜಾರಿಟಿಯಲ್ಲಿ ಬಂದಿದ್ದರೂ ಸಹ ಬಡವರಿಗೆ ಪರಿಣಾಮಕಾರಿಯಾಗಿ ಸಾಕಷ್ಟು ಸಹಾಯ ಮಾಡಲಿಕ್ಕೆ ಆಗಿಲ್ಲ. ಸಾಮಾನ್ಯ ಜೀವನ ಮಾಡುವುದಕ್ಕೆ ಎಷ್ಟು ಅನುಕೂಲ ಮಾಡಿಕೊಡಬೇಕು, ಅವರು ಗೌರವವಾಗಿ ಜೀವನ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕಾರ್ಯಕ್ರಮ ಹಾಕಿಕೊಂಡರೆ ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಂಡ ನಿದರ್ಶನಗಳನ್ನು ಕೇವಲ ಒಂದು ವರ್ಷ ಮೂರು ತಿಂಗಳಲ್ಲಿ ನೋಡುತ್ತಿದ್ದೇವೆ. ಆದ್ದರಿಂದ ಈಗಿರುವ ಕಾನೂನಿನ ಪ್ರಕಾರ ಅಂಥವರನ್ನು ತೆಗೆಯಬೇಕಾದರೆ 2/3ಭಾಗ ಮೆಜಾರಿಟಿ ಬೇಕಾಗುತ್ತದೆ. ಅದು ಸಾಧ್ಯವಾಗುವುದಿಲ್ಲ. ಹೀಗಾಗಿ ಇವರು ಇದೇ ರೀತಿ ನಡೆಸಿಕೊಂಡು ಬಂದಿದ್ದಾರೆ. ಅದುದರಿಂದ, ನಮ್ಮ ಕಾಂಗ್ರೆಸ್ ಪಕ್ಷ ಏನು ಅಧಿಕಾರದಲ್ಲಿದೆ, ನಾವು ಏನು ಉದ್ದೇಶಪೂರ್ವಕವಾಗಿ ಕಾರ್ಯಕ್ರಮಗಳನ್ನು ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಹಾಕಿಕೊಂಡಿದ್ದೇವೆ, ಅದಕ್ಕೆ ಸಾಕಷ್ಟು ಬೆಂಬಲ ನಮಗೆ ಸಿಕ್ಕುತ್ತಿಲ್ಲ ಅದುದರಿಂದ ನಾವು ಒಂದು ನಿರ್ಣಯಕ್ಕೆ ಬಂದಿದ್ದೇವೆ. ಇವತ್ತಿನ ದಿವಸ ಅವರು ಯಾವುದೇ ನಿರ್ಣಯ ಪಾಸ್ ಮಾಡಲಿಕ್ಕೆ ಆಗುವುದಿಲ್ಲ. ನಿರ್ಣಯ ಪಾಸ್ ಮಾಡದೆ ಏಕಾಏಕಿಯಾಗಿ ಕೆಲಸ ಮಾಡತಕ್ಕ ಪ್ರವೃತ್ತಿಯನ್ನು ನಾವು ಕಾಣುತ್ತಿದ್ದೇವೆ. ಆದುದರಿಂದ ಈ ಉದ್ದೇಶವನ್ನು ನಾವು ನಿರೂಪಣೆ ಮಾಡಿದ್ದೇವೆ. ಈ ಬಗ್ಗೆ ಜಾಸ್ತಿ ಭಾಷಣ ಮಾಡಲಿಕ್ಕೆ ಅವಕಾಶ ಇಲ್ಲ. ಆದುದರಿಂದ ಸಾಮಾನ್ಯವಾಗಿ ಬಹು ಸಂಖ್ಯೆಯಲ್ಲಿರತಕ್ಕ ಪಕ್ಷದ ಅಧ್ಯಕ್ಷರು ಯಾರಿರುತ್ತಾರೆ ಅಂಥವರನ್ನು ತೆಗೆಯುವುದಕ್ಕೆ ಅವಕಾಶ ಇರಬೇಕೆಂಬ ಒಂದು ಭಾವನೆಯಿಂದ ಸರ್ಕಾರ ತೀರ್ಮಾನ ಮಾಡಿದೆ.

ಕಾಂಗ್ರೆಸ್ ಪಕ್ಷ ತೀರ್ಮಾನ ಮಾಡಿದೆ. ಆದ್ದರಿಂದ ಈ ಒಂದು ಸಣ್ಣ ಮಸೂದೆಯನ್ನು ತಂದು ಈ ಸದನದ ಮುಂದೆ ನಾನು ಇಟ್ಟಿದ್ದೇನೆ. ಆದ್ದರಿಂದ ಇದಕ್ಕೆ ಎಲ್ಲರೂ ಒಪ್ಪಿಗೆ ಕೊಡಬೇಕು. ವಿಪರೀತವಾಗಿರತಕ್ಕ ತಿದ್ದುಪಡಿಯನ್ನು ನಾನು ತಂದಿಲ್ಲ, ಸಣ್ಣ ಮಸೂದೆಯನ್ನು ಮೆಜಾರಿಟಿ ಅಥವಾ 2/3 ಭಾಗ ಇರಬೇಕೇ ಅಥವಾ ಸಾಮಾನ್ಯವಾದ ಬಹುಸಂಖ್ಯೆ ಇರಬೇಕೇ ಎಂದು ಮಾತ್ರ ತಂದಿದ್ದೇವೆ. ಆದ್ದರಿಂದ ಸದನ ಇದಕ್ಕೆ ಬೆಂಬಲ ಕೊಟ್ಟು ಪಾಸ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೆ, ಇದು ಇವತ್ತಿನ ದಿವಸದ ಕಾರ್ಯಕಲಾಪದ ಪಟ್ಟಿಯಲ್ಲಿರಲಿಲ್ಲ. ಇದು ಹೆಚ್ಚುವರಿ ಅಜೆಂಡಾದಲ್ಲಿ ಬಂದಿದೆ. ಇದರ ಬಗ್ಗೆ ನಾನು ಮಾತನಾಡುವುದಕ್ಕೆ ನನಗೆ ಹೆಚ್ಚು ಕಾಲಾವಕಾಶ ಬೇಕು. ನನಗೆ ನಾಳೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಇದಕ್ಕೆ ಸ್ವಲ್ಪ ಟೈಮ್ ಬೇಕು.

MR. SPEAKER : Proposition is very simple. ಈಗ ಈ ಮಸೂದೆಯಲ್ಲಿ ಏನು ಹೇಳುತ್ತಾರೆಂದರೆ ಸಿಂಪಲ್ ಮೆಜಾರಿಟಿ ಇರಬೇಕು ಅಥವಾ 2/3 ಭಾಗ ಮೆಜಾರಿಟಿ ಇರಬೇಕೇ ಎಂದು. ಇದು ನೀವು ಲೈಬ್ರರಿಗೆ ಹೋಗಿ ಸ್ಟಡಿ ಮಾಡಬೇಕಾದಂಥ ವಿಚಾರವಲ್ಲ. 2/3 ಏತಕ್ಕೆ ಬೇಕು, ಸಿಂಪಲ್ ಮೆಜಾರಿಟಿ ಏತಕ್ಕೆ ಬಾರದು ಎಂದು. ಅವರು ಹೇಳುತ್ತಿದ್ದಾರೆ, ಸಿಂಪಲ್ ಮೆಜಾರಿಟಿ ಏತಕ್ಕೆ ಬೇಕು 2/3 ಏತಕ್ಕೆ ಬಾರದು ಎಂದು.

ಶ್ರೀ ಹೆಚ್. ಏಕಾಂತಯ್ಯ : ಆರ್ಟಿಕಲ್ 213 ಇರಬಹುದು, 123 ಇರಬಹುದು, ಅದನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಅದರ ಜೊತೆಯಲ್ಲಿ 134-79 ಅವೆರಡಕ್ಕಿಂತ ಹೆಚ್ಚಾಗಿ ಸನ್ಮಾನ್ಯ ಬಸವಲಿಂಗಪ್ಪನವರ ಪಕ್ಷ ಮತ್ತು ಸರ್ಕಾರ ಇದರ ಬಗ್ಗೆ ಏನು ಹೇಳಿದೆ ಎಂಬುದನ್ನು ಸಹ ವಿವರವಾಗಿ ನಾನು ಪ್ರಸ್ತಾಪ ಮಾಡಬೇಕಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದು ಲೈಬ್ರರಿಯಲ್ಲಿ ಸಿಗುತ್ತದಾ?

ಶ್ರೀ ಹೆಚ್. ಏಕಾಂತಯ್ಯ : ಸಿಗುತ್ತದೆ

ಶ್ರೀ ಎಂ. ವೀರಪ್ಪ ಮೊಯಿಲಿ: ಇದು ನನಗೆ ಅರ್ಥವಾಗುವುದಿಲ್ಲ, ಏನಾದರೂ ಇದ್ದರೆ ನೋಡೋಣ.

ಶ್ರೀ ಹೆಚ್. ಏಕಾಂತಯ್ಯ : ಅದನ್ನು ಲೈಬ್ರರಿಯಲ್ಲಿ ಹೋಗಿ ಹುಡುಕುವಂತ ಮೂರ್ಖ ನಾನಂತೂ ಅಲ್ಲ

ಶ್ರೀ ಡಿ.ಬಿ. ಚಂದ್ರೇಗೌಡ : ಅವರೇ ಕಳುಹಿಸಿಕೊಡುತ್ತಾರೆ. ಏನೇನಿದೆ ಕಳುಹಿಸಿ.

ಶ್ರೀ ಹೆಚ್. ಏಕಾಂತಯ್ಯ : ಸನ್ಮಾನ್ಯ ಕಾಂಗ್ರೆಸ್ ಅಧ್ಯಕ್ಷರು ಹೇಳಿದ್ದಾರೆ

ಶ್ರೀ ಎಂ. ವೀರಪ್ಪ ಮೊಯಿಲಿ : ನಮ್ಮ ಪಕ್ಷದ್ದೇನಾದರೂ ಲೈಬ್ರರಿಯಲ್ಲಿದ್ದರೆ ಅವರ ಪಕ್ಷದ್ದು ಏನಾದರೂ ಲೈಬ್ರರಿಯಲ್ಲಿ ಇದ್ದರೆ ಬೈರೇಗೌಡರ ಪಕ್ಷದ್ದು ಏನಾದರು ಲೈಬ್ರರಿಯಲ್ಲಿದ್ದರೆ ಹುಡುಕುವುದಕ್ಕೆ ತಾವು ಪಾಯಿಗೆ ಕೊಡುವುದಿದ್ದರೆ ಕೊಡಬಹುದು.

ಶ್ರೀ ಹೆಚ್. ಏಕಾಂತಯ್ಯ : ಅವರಿಗೆ ಗೊತ್ತಿಲ್ಲ ಅಂತ ಕಾಣುತ್ತಿದೆ ಮಾನ್ಯ ಅಧ್ಯಕ್ಷರೆ, 64ನೇ ತಿದ್ದುಪಡಿ ಸಂವಿಧಾನದಲ್ಲಿ ಏನಿದೆ.....ಪಾಪ ಅವರಿಗೆ ಗೊತ್ತಿಲ್ಲ ಅನ್ನಿಸುತ್ತಿದೆ, ಏನು ಮಾತನಾಡಿದರೂ ಅವರಿಗೆ ಹಾಗೆ ಕಾಣುತ್ತದೆ. ಲೈಬ್ರರಿ ಇರುವುದು ಅವರಿಗೆ ಗೊತ್ತಿಲ್ಲ ಇರಲಿ. ಏಕೆಂದರೆ ಕೆಲವರಿಗೆ ಅಭ್ಯಾಸ ಇರುತ್ತದೆ, ಕೆಲವರಿಗೆ ಅಭ್ಯಾಸ ಇರುವುದಿಲ್ಲ. ಲೈಬ್ರರಿಯಲ್ಲಿ ಕೂಡ ಇದೆ ಸನ್ಮಾನ್ಯ ಅಧ್ಯಕ್ಷರೆ.64ನೇ ತಿದ್ದುಪಡಿ ಆದಾಗ ಲೋಕಸಭೆಯಲ್ಲಿ ಚರ್ಚೆಯಾಗಿದೆ. ಆ -- ಚರ್ಚೆಯಲ್ಲಿ ತಮ್ಮ ಪಕ್ಷದವರೇ ಆಗಿರಲ್ಲಿ ಅಥವಾ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಧಿಕಾರ ವಿಕೇಂದ್ರೀಕರಣದಲ್ಲಿ ನಂಬಿಕೆ

ಇರುವ ಜನ ಏನೇನು ಹೇಳಿದ್ದಾರೆ ಈಗ ಏನು ಮಾಡುತ್ತಿದ್ದಾರೆ ಅದನ್ನು ನಾನು ದೇಶದ ಜನತೆಯ ದೃಷ್ಟಿಯಿಂದ ಹೇಳಬೇಕಾಗಿದೆ. ಆದ್ದರಿಂದ ಇವರನ್ನು ಒಪ್ಪಿಸುತ್ತೇನೆ. ಆದರಿಂದ ಆರ್ಡಿನೆನ್ಸ್ ಹೊರಟುಹೋಗುತ್ತದೆ ಎಂಬ ಭ್ರಮೆ ನನಗೇನೂ ಇಲ್ಲ. ನಾನಾ ಕೆಲಸವನ್ನು ಮಾಡಲು ಈವತ್ತಿನ ದಿವಸ ನಾನು ಸಿದ್ಧನಾಗಿ ಬಂದಿಲ್ಲ. ದಯವಿಟ್ಟು ನಾಳೆ ದಿವಸ ಅನುಮತಿ ನನಗೆ ಕೊಡಬೇಕು. ನಾನು ಮಾತನಾಡುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಟಿ.ಎಂ. ಮಂಜುನಾಥ್ (ತಿಪಟೂರು): ಮಾನ್ಯ ಅಧ್ಯಕ್ಷರೆ, ತಾವು ಆಗಲೇ ಅಪ್ಪಣೆ ಕೊಡಿಸಿದಿರಿ. ಈ ತಿದ್ದುಪಡಿ ಏನು ತಂದಿದ್ದಾರೆ, ಇದು ಇವತ್ತು ಬಂದಿರುವ ಪ್ರಸ್ತಾವನೆ ಅಲ್ಲ. ವಿರೋಧ ಪಕ್ಷದವರು ಇದರ ಬಗ್ಗೆ ಹೋದ ಅಧಿವೇಶನದಲ್ಲಿ ಸಾಕಷ್ಟು ಪ್ರಸ್ತಾವನೆ ಮಾಡಿದ್ದಾರೆ ಮತ್ತು ಜನತೆಯ ಮೇಲೆ ವಿಶೇಷವಾದಂಥ ವಿಚಾರವನ್ನು ಸಹ ಈಗಾಗಲೇ ಹೇಳಿದ್ದಾರೆ. ಸನ್ಮಾನ್ಯ ಹಿರಿಯ ಸದಸ್ಯರಾದ ಏಕಾಂತಯ್ಯನವರು ಕಾಲ ತಳ್ಳಬೇಕು ಎಂಬ ದೃಷ್ಟಿ ಒಂದೇ ಅವರ ಭಾವನೆ. ಎಲ್ಲಾ ವಿಚಾರದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಪ್ರಸ್ತಾವನೆ ಮಾಡಿದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳತಕ್ಕದ್ದು ತಾವು ಹೇಳಿದಹಾಗೆ ಇದೊಂದು ಅತೀ ಸಲಭವಾಗಿರತಕ್ಕದ್ದು. ಎಲ್ಲರಿಗೂ ಗೊತ್ತಿರತಕ್ಕದ್ದು. ನಮ್ಮ ಕಾರ್ಯಕ್ರಮವನ್ನು ಸುಲಲಿತವಾಗಿ, ಬಡಜನರ ಪರವಾಗಿ ಮಾಡುವುದಕ್ಕೆ ನಮಗೀಗ ಅಡಚಣೆ ಉಂಟಾಗಿದೆಯೆಂದು ಅವರ ಗಮನಕ್ಕೂ ಬಂದಿದೆ. ಈ ನಮ್ಮ ಬಡಜನರ ಉದ್ಧಾರಕ್ಕೋಸ್ಕರ ಕಲ್ಯಾಣ ಕಾರ್ಯಕ್ರಮಗಳನ್ನು ಮಾಡತಕ್ಕ ಒಂದು ಅವಕಾಶವನ್ನು ಸಹೃದಯದಿಂದ....

ನಮ್ಮ ಆ ಕಡೆ ಪಕ್ಷದವರು ಒಪ್ಪಿ ಈ ಮಸೂದೆಯನ್ನು ಪಾಸ್ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಾರೆ ಎಂದು ಹೇಳಿ ತಮ್ಮ ಮುಖಾಂತರ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಈ ಮಸೂದೆಯು ನನ್ನ ವಿರೋಧಗಳಿಗೆ ಸ್ವಲ್ಪ ಸುದೀರ್ಘವಾದ ಕಾರಣಗಳನ್ನು ನಾನು ಕೊಡಬೇಕಾಗುತ್ತದೆ. ತಾಂತ್ರಿಕವಾಗಿ ಇಲ್ಲಿ ನಾನು ಈವತ್ತು ಮಾತನಾಡುವುದಕ್ಕೆ ಸಿದ್ಧನಿರಲಿಲ್ಲ. ಕಾರಣ ಏನೆಂದರೆ ಇದನ್ನು ವಿರೋಧಿಸಿದಂಥ ಒಂದು ಸ್ಟ್ಯಾಚುಟರಿ ರೆಸಲ್ಯೂಷನ್ ಇರುವುದರಿಂದ, ಅದು ಮೊದಲು ಚರ್ಚೆಯಾಗಿ ಮತಕ್ಕೆ ಹಾಕಿದಮೇಲೆ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳುತ್ತಾರೆ ಎಂಬುದು ನನ್ನ ಸಾಮಾನ್ಯ ತಿಳಿವಳಿಕೆಯಾಗಿತ್ತು.

ಆದರೆ ತಾವು ಈ ಮಸೂದೆ ಮಂಡನೆಗೆ ಅವಕಾಶ ಮಾಡಿಕೊಟ್ಟಿರುವುದರಿಂದ ಮಸೂದೆ ಬಗ್ಗೆ ನಾವು ಏನಾದರೂ ಹೇಳಬೇಕಾಗುತ್ತದೆ.

ಅಧ್ಯಕ್ಷರು : ಮಸೂದೆ ಮತ್ತು ಸ್ಟ್ಯಾಚುಟರಿ ರೆಸಲ್ಯೂಷನ್ ಎರಡೂ ಮೂವ್ ಆಗಿದೆ. ಎರಡೂ ಕನ್ಸೀಡರೇಷನ್‌ಗೆ ಇವೆ. ಎರಡರ ಬಗ್ಗೆಯೂ ತಾವು ಹೇಳಬಹುದು.

ಶ್ರೀ ಡಿ.ಬಿ.ಚಂದ್ರೇಗೌಡ : ರೆಸಲ್ಯೂಷನ್ ಮೂವ್ ಮಾಡಿರುವುದು ನಾಳೆಯವರೆಗೂ ಸಮಯಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ ನಾನು ಏನು ಹೇಳಲಿ

ಅಧ್ಯಕ್ಷರು : ಇವತ್ತು ತಾವು ಮಾತನಾಡಿ. ಅವರು ನಾಳೆ ಮಾತನಾಡುತ್ತಾರೆ.

ಶ್ರೀ ಡಿ.ಬಿ.ಚಂದ್ರೇಗೌಡ : ನನ್ನ ಸಲಹೆ ಈ ಬಗ್ಗೆ ಏನೆಂದರೆ ಹೇಗಿದ್ದರೂ ಇದು ನಾಳೆಗೆ ಹೋಗುತ್ತದೆ. ಇವತ್ತು ಬಡ್ಜೆಟ್ ಮೇಲೆ ಚರ್ಚೆ ತೆಗೆದುಕೊಳ್ಳೋಣ.

ಅಧ್ಯಕ್ಷರು : ಇವತ್ತು ಅರ್ಧ ಗಂಟೆ ಚರ್ಚೆ ಕೂಡಾ ಇದೆ. ಈಗ ನಾವು ಇನ್ನೊಂದು ಬಿಲ್ಲನ್ನು ತೆಗೆದುಕೊಳ್ಳೋಣ. We will take up the Removal of

Disqualification Bill ಒಂದು ಇದೆ. So we will take up both the bills as well as your resolution for consideration and passing tomorrow.

ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣೆ) (ತಿದ್ದುಪಡಿ) ವಿಧೇಯಕ 1991

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1991ನೇ ಸಾಲಿನ ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಇದು ಬಹಳ ಸರಳವಾದಂಥ ಮಸೂದೆ. ಏಕೆಂದರೆ ಮಂಡಲ ಪಂಚಾಯಿತಿಗಳ ಪ್ರಧಾನ ಮತ್ತು ಉಪಪ್ರಧಾನ, ಅನುಕ್ರಮವಾಗಿ 300 ಮತ್ತು 150 ರೂಪಾಯಿಗಳ ಮಾಸಿಕ ವೇತನವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ. ಇದು ಜಿಲ್ಲಾ ಪರಿಷತ್ ತಿದ್ದುಪಡಿ ಮಸೂದೆಗೆ ಸಂಬಂಧಪಡುವುದಿಲ್ಲ. ಭಾರತ ಸಂವಿಧಾನದ 191ನೇ ಅನುಚ್ಛೇದದ 1ನೇ ಖಂಡದ (ಎ) ಅದರ ಉಪ ಖಂಡದ ಅಡಿಯಲ್ಲಿ ರಾಜ್ಯದ ಯಾವುದೇ ಲಾಭದಾಯಕ ಹುದ್ದೆಗಳಲ್ಲಿ ಧಾರಣ ಮಾಡಿರುವ ವ್ಯಕ್ತಿಗಳು, ರಾಜ್ಯ ವಿಧಾನ ಮಂಡಲದ ಸದಸ್ಯರಾಗಿ ಆಯ್ಕೆಯಾಗಲು ಅಥವಾ ಅದರ ಸದಸ್ಯರಾಗಿ ಮುಂದುವರಿಯಲು, ರಾಜ್ಯ ವಿಧಾನ ಮಂಡಲವು ಕಾನೂನಿನ ಮೂಲಕ ಅಂಥ ಹುದ್ದೆಗಳು ಅವರನ್ನು ಅನರ್ಹಗೊಳಿಸತಕ್ಕುದಲ್ಲ ಎಂದು ಘೋಷಿಸಿರದಿದ್ದರೆ ಅನರ್ಹರಾಗುತ್ತಾರೆ. ಮತ್ತೆ ಜಿಲ್ಲಾ ಪರಿಷತ್ತು

(ಮಾನ್ಯ ಉಪಾಧ್ಯಕ್ಷಿಣಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳ ಧಾರಣ ಮಾಡುವ ವಿಚಾರದಲ್ಲಿ ವಿನಾಯಿತಿ ಕೊಡಲಾಗಿದೆ. ಆ ವಿಷಯದಲ್ಲಿ ಮುಂಚೆಯೇ ತಿದ್ದುಪಡಿಯಾಗಿದೆ. ಆದ್ದರಿಂದ ಆ ವಿಷಯ ಇಲ್ಲಿ ಬರುವುದಿಲ್ಲ. ನಮ್ಮ ಮಾನ್ವಿಯ ಬಸವಗೌಡರು ಪ್ರಧಾನರಾಗಿದ್ದರು. ಅಲ್ಲಿ 300 ರೂ. ಬರುತ್ತಾ ಇತ್ತು ಎಂದು ಅವರು ರಿಸೈನ್ ಮಾಡಿದ್ದಾರೆ. ಈಗ ಪ್ರಧಾನ ಮತ್ತು ಉಪಪ್ರಧಾನರ ಹುದ್ದೆಗಳನ್ನು ಸೇರಿಸಲು ಮತ್ತು ಅಂಥ ಹುದ್ದೆಗಳನ್ನು ಧಾರಣ ಮಾಡಿರುವುದು, ರಾಜ್ಯ ವಿಧಾನ ಮಂಡಲಕ್ಕೆ ಒಬ್ಬ ಸದಸ್ಯನಾಗಿ ಆಯ್ಕೆ ಆಗಲು ಅಥವಾ ಅದರ ಒಬ್ಬ ಸದಸ್ಯನಾಗಿ ಮುಂದುವರಿಯಲು ಅನರ್ಹಗೊಳಿಸುವುದಿಲ್ಲ ಎಂಬುದಕ್ಕಾಗಿ ಸದರಿ ಅಧಿನಿಯಮವನ್ನು ತಿದ್ದುಪಡಿ ಮಾಡಲು ಈಗ ಪ್ರಸ್ತಾಪಿಸಲಾಗಿದೆ. It should have been brought then and there but by mistake it was no brought. Now it is brought.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಇದು ಮಿಸ್ಟೇಕ್ ಅಲ್ಲ. ಈಗ ನಿಮಗೆ ಗೊತ್ತಾಗಿದೆ. ನಿಮ್ಮ ಪಕ್ಷದ ಅನೇಕರು ಅಲ್ಲದಿದ್ದರೂ ಕೆಲವು ಜನರು ಇರಬಹುದು. ಮಂಡಲ ಪ್ರಧಾನರಾಗಿ ಇಲ್ಲಿಗೆ ಬಂದಿದ್ದಾರೆ. ಇವರು ಬಂದ ಮೇಲೆ ಗೊತ್ತಾಯಿತು. ಅಲ್ಲಿಯವರೆಗೆ ಗೊತ್ತಾಗಲಿಲ್ಲ. ನಮ್ಮ ಕಾಲದಲ್ಲಿ ಮಂಡಲ ಪ್ರಧಾನರು ಬಂದಿರಲಿಲ್ಲ. ಈ ಮಸೂದೆ ತಂದಾಗ ಮಂಡಲ ಪ್ರಧಾನರು ಇರಲಿಲ್ಲ. ಹಿಂದೆ ಏಕೆ ಹಾಗೇ ಬಿಟ್ಟರು ಎಂದರೆ ಮಂಡಲ ಪ್ರಧಾನರಾಗಿ ಜಿಲ್ಲಾ ಪರಿಷತ್ ಸದಸ್ಯರಾಗಿ, ಶಾಸನಸಭೆ ಸದಸ್ಯರಾಗಿ ಒಬ್ಬರೇ ಮುಂದುವರಿಯಬೇಕಾಗಿಲ್ಲ. ಅವರವರ ಕೆಲಸ ಅವರು ಮಾಡುತ್ತಾರೆ ಎಂದು ಬಿಟ್ಟಿದ್ದಾರೆ. ಎಲ್ಲಾ ಕೆಲಸ ಒಬ್ಬರೇ